**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.</u>**

**Mis 6/2022**

ಸಾಕ್ಷಿಯನ್ನು ದಿಃ **13.02.2026** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.
**<u>ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ</u>**. SSG **ಪರ ಶ್ರೀ**. SG **ವಕೀಲರಿಂದ**:

ಮಾರ್ಚ್ 2020 ರಿಂದ ಜುಲೈ 2021ರವರೆಗೆ ಕರ್ನಾಟಕದಲ್ಲಿ ಕೋರೋನಾ ಲಾಕ್ ಡೌನ್ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಜನರು ಯಾವುದೇ ಇಲಾಖೆಗಳಿಗೆ ಅಥವಾ

ಸಾರ್ವಜನಿಕವಾಗಿ ನಗರ ಪ್ರದೇಶಗಳಲ್ಲಿ ಓಡಾಡುವುದನ್ನು ನಿರ್ಬಂದಿಸಲಾಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಕ್ಕಳು ಮತ್ತು ಹಿರಿಯ ನಾಗರೀಕರಿಗೆ ನಗರ ಪ್ರದೇಶಗಳಲ್ಲಿ ಓಡಾಡುವುದು ಕಟ್ಟುನಿಟ್ಟಾದ ನಿಷೇಧವಿತ್ತು ಎಂದರೆ ಸರಿಯಲ್ಲ. ಅಸಲು ದಾವಾ ಸಂಃ 82/2018ರಲ್ಲಿ ಮಾರ್ಚ್ 2020 ರಿಂದ ಜುಲೈ 2021ರವರೆಗೆ ವಾದಿ ಮತ್ತು ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ನಾನು ಬರುತ್ತಿದ್ದೆ. ಅವರು ಬರುತ್ತಿರಲಿಲ್ಲ. ನಾನು ಬರುತ್ತಿದ್ದೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. ಮೇಲೆ ಹೇಳಿದ ದಾವೆಯ ಆದೇಶಿಕ ಹಾಳೆಯಲ್ಲಿ ವಾದಿ ಮತ್ತು ಪ್ರತಿವಾದಿಯರು ಹಾಜರಾಗಿಲ್ಲ ಎಂದು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆ ರೀತಿ ದಾಖಲಾಗಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಾಕ್ ಡೌನ್ ಇದ್ದ ಕಾರಣ ನಗರ ಪ್ರದೇಶಗಳಿಗೆ ಯಾರನ್ನು ಬಿಡದೇ ಇರದಿದ್ದ ಕಾರಣ ಪಕ್ಷಗಾರರು ಹಾಜರಾಗಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಃ 82/2018ರಲ್ಲಿ ನಾನು ತಕರಾರು ಹಾಕಿದ್ದೆ. ಸದರಿ ದಾವೆಯಲ್ಲಿ ಅಂತಿಮ ತೀರ್ಪು ಮತ್ತು ಡಿಕ್ರಿ ಆಗಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಅಂತಿಮ ಡಿಕ್ರಿ ಮತ್ತು ತೀರ್ಪಾಗಲು ನನ್ನ ತಕರಾರು ಇಲ್ಲ ಎಂದರೆನನಗೆ ಗೊತ್ತಾಗುವುದಿಲ್ಲ. ಸದರಿ ದಾವೆಯಲ್ಲಿ ಅಂತಿಮ ತೀರ್ಪು ಮತ್ತು ಡಿಕ್ರಿಯಾದಲ್ಲಿ ಆಸ್ತಿ ಬಿಟ್ಟು ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ 70-75 ವರ್ಷ ವಯಸ್ಸಾಗಿದೆ. ಕೊರೋನಾ ಸಮಯದಲ್ಲಿ ಅರ್ಜಿದಾರರು ವಕೀಲರನ್ನು ಭೇಟಿಯಾಗಿ ಅಸಲು ದಾವೆಯಲ್ಲಿ ಸರಿಯಾದಮಾಹಿತಿ ಕೊಡಲು ಆಗಲಿಲ್ಲ ಎಂದರೆ ಗೊತ್ತಿಲ್ಲ. ಆ ಕಾರಣದಿಂದಾಗಿ ಸದರಿ ದಾವೆ ವಜಾಗೊಂಡಿದೆ ಎಂದರೆ ಗೊತ್ತಿಲ್ಲ. ಈ ಅರ್ಜಿ ಪುರಸ್ಕೃತವಾದರೆ ನನಗೆ ತೊಂದರೆ ಇಲ್ಲ ಎಂದರೆ ಗೊತ್ತಾಗುವುದಿಲ್ಲ.

## ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.